## ಪ್ರಾರ್ಥನೆ

# ಮನೀಷಾ ಪಂಚಕಮ್ – ೧



**ಜಾಗ್ರತ್ ಸ್ವಪ್ನಸುಷುಪ್ತಿಷು ಸ್ಫುಟತರಾ ಯಾ ಸಂವಿದುಜ್ಜೃಂಭತೇ**
**ಯಾ ಬ್ರಹ್ಮಾದಿ ಪಿಪೀಲಿಕಾಂತ ತನುಷು ಪ್ರೋತಾ ಜಗತ್ಸಾಕ್ಷಿಣೀ ।**
**ಸೈವಾಹಂ ನ ಚ ದೃಶ್ಯವಸ್ತ್ವಿತಿ ದೃಢಪ್ರಜ್ಞಾಪಿ ಯಸ್ಯಾಸ್ತಿ ಚೇತ್**
**ಚಂಡಾಲೋಽಸ್ತು ಸ ತು ದ್ವಿಜೋಽಸ್ತು ಗುರುರಿತ್ಯೇಷಾ ಮನೀಷಾ ಮಮ ॥ ೧॥**

ಯಾವ ಚೈತನ್ಯವು ಎಚ್ಚರ, ಸ್ವಪ್ನ, ಗಾಢನಿದ್ರೆಗಳೆಂಬ ಮೂರು ಅವಸ್ಥೆಗಳಲ್ಲಿಯೂ ಬಹಳ ಸ್ಪಷ್ಟವಾಗಿ ತೋರಿಕೊಳ್ಳುವುದೋ, ಯಾವುದು ಚತುರ್ಮುಖ ಬ್ರಹ್ಮನಿಂದ ಇರುವೆಯ ವರೆಗಿನ ಎಲ್ಲ ವಿಧದ ಶರೀರಗಳಲ್ಲಿಯೂ ಜಗತ್‌ಸಾಕ್ಷಿಯ ರೂಪದಿಂದ ವ್ಯಾಪಿಸಿ ಕೊಂಡಿದೆಯೊ ಅದೇ ನಾನು, ಕಣ್ಣಿಗೆ ಕಾಣುತ್ತಿರುವ ಈ ಶರೀರವಲ್ಲ — ಎಂಬ ದೃಢವಾದ ಪ್ರಜ್ಞೆಯು ಯಾರಿಗಿರುವುದೋ ಅವನು ಚಂಡಾಲನಾಗಿರಲಿ ಅಥವಾ ಬ್ರಾಹ್ಮಣನಾಗಿರಲಿ, ಅವನೇ ಗುರುವು, ಎಂಬುದು ನನ್ನ ತಿಳಿವಳಿಕೆ.

**ಬ್ರಹ್ಮೈವಾಹಮಿದಂ ಜಗಚ್ಚ ಸಕಲಂ ಚಿನ್ಮಾತ್ರ ವಿಸ್ತಾರಿತಂ**
**ಸರ್ವಂ ಚೈತದವಿದ್ಯಯಾ ತ್ರಿಗುಣಯಾಽಶೇಷಂ ಮಯಾ ಕಲ್ಪಿತಮ್ ।**
**ಇತ್ಥಂ ಯಸ್ಯ ದೃಢಾ ಮತಿಃ ಸುಖತರೇ ನಿತ್ಯೇ ಪರೇ ನಿರ್ಮಲೇ**
**ಚಂಡಾಲೋಽಸ್ತು ಸ ತು ದ್ವಿಜೋಽಸ್ತು ಗುರುರಿತ್ಯೇಷಾ ಮನೀಷಾ ಮಮ ॥ ೨॥**

ನಾನು ಬ್ರಹ್ಮವೇ, ಈ ಜಗತ್ತೂ (ಬ್ರಹ್ಮವೇ). ಎಲ್ಲವೂ ಚಿದ್ವಸ್ತುವಾದ (ಬ್ರಹ್ಮದ) ಆವಿರ್ಭಾವವೇ. ಇದೆಲ್ಲವೂ ತ್ರಿಗುಣಾತ್ಮಕವಾದ ಅವಿದ್ಯೆಯಿಂದ ನಾನು ಕಲ್ಪಿಸಿಕೊಂಡಿರುವುದೇ — ಹೀಗೆ ಯಾವನಿಗೆ ದೃಢವಾದ ಬುದ್ಧಿಯಿರುವುದೋ (ಮತ್ತು) ಸುಖರೂಪವೂ ನಿತ್ಯವೂ ಶ್ರೇಷ್ಠವೂ ನಿರ್ಮಲವೂ (ಆದ ಬ್ರಹ್ಮದಲ್ಲಿ ದೃಢವಾಗಿ ಬುದ್ಧಿಯು ನೆಲೆಸಿರುವುದೋ) ಅವನು ಚಂಡಾಲನಾಗಿರಲಿ ಅಥವಾ ಬ್ರಾಹ್ಮಣನಾಗಿರಲಿ, ಅವನೇ ಗುರುವು ಎಂಬುದು ನನ್ನ ತಿಳಿವಳಿಕೆ.

**ಶಶ್ವನ್ನಶ್ವರಮೇವ ವಿಶ್ವಮಖಿಲಂ ನಿಶ್ಚಿತ್ಯ ವಾಚಾ ಗುರೋಃ**
**ನಿತ್ಯಂ ಬ್ರಹ್ಮ ನಿರಂತರಂ ವಿಮೃಶತಾ ನಿರ್ವ್ಯಾಜಶಾಂತಾತ್ಮನಾ ।**
**ಭೂತಂ ಭಾವಿ ಚ ದುಷ್ಕೃತಂ ಪ್ರದಹತಾ ಸಂವಿನ್ಮಯೇ ಪಾವಕೇ**
**ಪ್ರಾರಬ್ಧಾಯ ಸಮರ್ಪಿತಂ ಸ್ವವಪುರಿತ್ಯೇಷಾ ಮನೀಷಾ ಮಮ ॥ ೩ ॥**

ಈ ಪ್ರಪಂಚವೆಲ್ಲವೂ ಯಾವಾಗಲೂ ನಶ್ವರವೇ ಎಂದು ಗುರುವಾಕ್ಯದಿಂದ ನಿಶ್ಚಯಿಸಿಕೊಂಡು, ನಿಷ್ಕಾರಣವಾಗಿಯೇ ಶಾಂತವಾಗಿರುವ ಅಂತಃಕರಣದಿಂದ ನಿತ್ಯವಾದ ಬ್ರಹ್ಮವನ್ನು ಎಡೆಬಿಡದೆ ವಿಮರ್ಶಿಸುತ್ತಿರುವ, ಹಿಂದಿನ ಮತ್ತು ಮುಂದಿನ ಪುಣ್ಯಪಾಪಗಳನ್ನು ಜ್ಞಾನಾಗ್ನಿಯಲ್ಲಿ ಸುಟ್ಟು ಹಾಕಿರುವ ಜ್ಞಾನಿಯು ತನ್ನ ಶರೀರವನ್ನು ಪ್ರಾರಬ್ಧಕ್ಕೆ ಒಪ್ಪಿಸಿರುವನೆಂಬುದು ನನ್ನ ಮತವು.

## ಸೂಕ್ತಿಪ್ರಭ

# ಚಿಂತನೆಯ ಸೂಕ್ತಿಗಳು




ಮಾನವನು ಸೋಲುವುದಕ್ಕಾಗಿ ಹುಟ್ಟಿದವನಲ್ಲ. ಅವನನ್ನು ನಾಶ ಮಾಡಬಹುದು, ಆದರೆ ಅವನೆಂದಿಗೂ ಸೋತು ಹೋಗಲಾರ.

**ಅರ್ನೆಸ್ಟ್ ಹೆಮಿಂಗ್ ವೇ**




ಕಲಿಕೆ ಎಂದೂ ಮನಸ್ಸಿಗೆ ಆಯಾಸ ತರಲಾರದು.

**ಲಿಯೋನಾರ್ಡೋ ಡಾ ವಿಂಚಿ**




ಕರುಣೆಯ ಭಾವನೆಯು ಅದೆಷ್ಟೇ ಸಣ್ಣದಾಗಿರಲಿ, ಎಂದಿಗೂ ವ್ಯರ್ಥವಾಗದು.

**ಈಸೋಪ**



ಸಾವಿರ ಮೈಲು ದೂರದ ಯಾತ್ರೆ ಆರಂಭವಾಗುವುದು ಒಂದೇ ಒಂದು ಹೆಜ್ಜೆಯಿಂದ.

**ಲಾವೋ ತ್ಸು**



ನಿಜವಾದ ಸ್ನೇಹಿತರು ತಮ್ಮ ಪ್ರೀತಿಯನ್ನು ತೋರಿಸುವುದು ವಿಪತ್ತು ಬಂದಾಗ, ಸಂತಸದ ಗಳಿಗೆಯಲ್ಲಲ್ಲ.

**ಯೂರಿಪಿಡಿಸ್**



ಬೆಂಕಿಯಿಲ್ಲದೆ ದೀಪ ಉರಿಯಲಾರದು. ಅಂತೆಯೇ, ಆಧ್ಯಾತ್ಮಿಕ ಜೀವನವಿಲ್ಲದೆ ಮನುಷ್ಯ ಬದುಕಲಾರ.

**ಭಗವಾನ್ ಬುದ್ಧ**